# ಟೆರ್ರಿ ಫಾಕ್ಸ್‌ನ ಮ್ಯಾರಥಾನ್



✍ ಸುನಯನ ವಾಲ್ಟರ್ಸ್

1980ರಲ್ಲಿ ಟೆರ್ರಿ ಫಾಕ್ಸ್ ಎಂಬ ಕೆನಡಾ ದೇಶದ ಯುವಕನೊಬ್ಬನು ನ್ಯೂಫೌಂಡ್‌ಲ್ಯಾಂಡ್‌ನ ಸೈಂಟ್‌ಜೋನ್ಸ್ ಎಂಬಲ್ಲಿಂದ ಬ್ರಿಟಿಷ್ ಕೊಲಂಬಿಯಾದ ವ್ಯಾಂಕೂವರ್ ಎಂಬಲ್ಲಿಗೆ ಮ್ಯಾರಥಾನ್ ಓಟ ಪ್ರಾರಂಭಿಸಿದನು. ಈ ದಾರಿಯು ಸುಗಮವಾಗಿರಲಿಲ್ಲ. ಬೆಟ್ಟಗಳಿಂದ ಕೂಡಿದ ಪ್ರದೇಶವಾಗಿತ್ತದು. ಈ ಮ್ಯಾರಥಾನ್‌ನ ಉದ್ದೇಶವು ಕ್ಯಾನ್ಸರ್‌ನ ಕುರಿತಾದ ಉನ್ನತ ಸಂಶೋಧನೆಗಾಗಿ ಹಣಸಂಗ್ರಹ ಮಾಡುವುದಾಗಿತ್ತು. ಉತ್ತಮ ಉದ್ದೇಶ. ಆದರೆ ಈ ಓಟದ ವಿಶೇಷತೆ ಏನೆಂದರೆ ಟೆರ್ರಿಯು ಸ್ವತಃ ಕ್ಯಾನ್ಸರ್ ರೋಗಿಯಾಗಿದ್ದನು! ಅಷ್ಟೇ ಅಲ್ಲ ಅವನ ಒಂದು ಕಾಲು ಕೃತಕ ಕಾಲಾಗಿತ್ತು.

ಎಷ್ಟೋ ಜನ ತಮ್ಮ ಸಾಹಸಭರಿತ ಶ್ರದ್ಧಾಪೂರ್ವಕ ಸಂಶೋಧನೆಗಳ ಫಲವಾಗಿ ಪೋಲಿಯೋ, ಕ್ಷಯದಂತಹ ನಿಯಂತ್ರಿಸಲಾಗದೆಂದುಕೊಂಡಿದ್ದ ರೋಗಗಳನ್ನು ಹಿಮ್ಮೆಟ್ಟಿಸಿ ಜಯಸಾಧಿಸಿದ್ದಾರೆ. ರೋಗ ನಿರೋಧಕ ಚುಚ್ಚುಮದ್ದಿನ ಪ್ರಯೋಗಕ್ಕಾಗಿ ಮೊದಲ ಪ್ರಯೋಗಪಶುವಾಗಿ ತಮಗೇ ಚುಚ್ಚಿಕೊಂಡ ವಿಜ್ಞಾನಿಗಳಿದ್ದಾರೆ. ರೇಡಿಯಂ ಕಂಡುಹಿಡಿದು ವಿಸ್ತೃತ ಸಂಶೋಧನೆ ಮಾಡಿದ ಮೇರಿಕ್ಯೂರಿಯಂತಹವರು ರೇಡಿಯೇಶನ್‌ನ ದುಷ್ಪರಿಣಾಮದಿಂದಲೇ ಅಕಾಲಮರಣಕ್ಕೊಳಗಾದುದು ವಿಷಾದಕರ. 1980ರಲ್ಲಿ ಕ್ಯಾನ್ಸರ್ ಸಂಶೋಧನೆ ಹೆಚ್ಚು ಮುಂದುವರಿದಿರಲಿಲ್ಲ. ಕ್ಯಾನ್ಸರ್ ಎಂದರೆ ಖಚಿತ ಸಾವು ಎಂಬ ಕಾಲವಾಗಿತ್ತದು. ಹಾಗಿದ್ದಾಗ ಟೆರ್ರಿ ಫಾಕ್ಸ್ ಎಂಬ ಈ ಧೀಮಂತ ಯುವಕನು ಮ್ಯಾರಥಾನ್ ಓಟ ಕೈಕೊಂಡು ಅಂದುಕೊಂಡ ಗುರಿಮುಟ್ಟಲಾರದೆ ಹೋದರೂ ಆತನು ಸಂಗ್ರಹಿಸಿದ ಮಿಲಿಯಗಟ್ಟಲೆ ಡಾಲರ್‌ಗಳು ಕ್ಯಾನ್ಸರ್‌ನ ಕುರಿತಾದ ಸಂಶೋಧನೆಗಾಗಿ ಅಮೂಲ್ಯ ನಿಧಿಯಾಯಿತು. ಒಂಟಾರಿಯೋದ ಥಂಡರ್ ಟೀ ಎಂಬಲ್ಲಿಗೆ ಕೆಲವೇ ಮೈಲು ಪೂರ್ವಕ್ಕಿರುವ "ನಿರೀಕ್ಷೆಯ ಮ್ಯಾರಥಾನ್" (Marathon of Hope) ಎಂಬ ಸುಂದರವಾದ ಸ್ಮಾರಕವು ಆತನ ಓಟದ ಕೊನೆಯನ್ನು ಸೂಚಿಸಲು ಕಟ್ಟಲ್ಪಟ್ಟಿದೆ. ಅಲ್ಲದೆ 2005ರಲ್ಲಿ ಆತನ ಗೌರವಕ್ಕಾಗಿ ಕೆನಡಾ ದೇಶವು ಡಾಲರ್ ನಾಣ್ಯವನ್ನು ಅಚ್ಚುಹಾಕಿದೆ.

ಟೆರ್ರಿ ಫಾಕ್ಸ್‌ನ ನಿರ್ಧಾರವು ಮಾನವಕುಲದ ಮೇಲಿನ ಅವನ ಅಪಾರ ಪ್ರೀತಿಯ ನಿದರ್ಶನವಾಗಿದೆ. ಇದನ್ನು ಕೇಳಿದಾಗ ಮಾನವಕುಲದ ಪಾಪವೆಂಬ ರೋಗದ ಶಮನಕ್ಕಾಗಿ ಯೇಸುಸ್ವಾಮಿಯು ಪೂರ್ವನಿರ್ಧಾರಿತವಾಗಿಯೇ ಶಿಲುಬೆಯೆಡೆಗೆ ಸಾಗಿದ ಆತನ ಮಹಾಪ್ರೀತಿಯು ನೆನಪಾಗುತ್ತದೆಯಲ್ಲವೆ? **"ಅವನು ಹೊತ್ತ ಹೊರೆಯು ನಮ್ಮ ಸಂಕಟವೇ, ಹೌದು. ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು. ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು. ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು"** (ಯೆಶಾಯ 53:4–5).

ಕ್ಯಾನ್ಸರ್ ಮುಕ್ತತೆಗಾಗಿ ಅತ್ಯುತ್ತಮವಾದ ಔಷಧಿಗಳಿದ್ದೂ ರೋಗಿಯೊಬ್ಬನು ಅದನ್ನು ನಿರಾಕರಿಸಿದರೆ ಅವನನ್ನು ಮೂರ್ಖನೆಂದು ಕರೆಯುತ್ತೇವೆ. ಆದರೆ ಪಾಪವೆಂಬ ರೋಗದ ಮುಕ್ತಿಗಾಗಿ ಯೇಸುಸ್ವಾಮಿಯು ಕೊಡುವ ಔಷಧಿಯನ್ನು ಕಡೆಗಣಿಸಿ ನಿರಾಕರಿಸುವವರಿಗೆ ಏನು ಹೇಳೋಣ?

**"ಯೇಸುವಿನ ರಕ್ತವು ಸಕಲಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ"** (1 ಯೋಹಾನ 1:7).